55

# ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ಫೋನ್ ನಂ:-08533-230545
ಫ್ಯಾಕ್ಸ್ ನಂ:-08533-230544
E-mail :eegangavati@gmail.com
demoaogvt@gmail.com

ರವರಕಛೇರಿ
ಕಾರ್ಯನಿರ್ವಾಹಕಅಭಿಯಂತರರು (ವಿ),
ಕಾರ್ಯ ಮತ್ತು ಪಾಲನೆ ವಿಭಾಗ
ಗು. ವಿ.ಸ.ಕಂ.ನಿ., ಗಂಗಾವತಿ.

ಸಂಖ್ಯೆ: ಕಾನಿಅ(ವಿ)/ಸಕಾನಿಅ(ಕ)/ಸಅ(ತಾಂ)/ಗಂ/19-20/ 1226-30 ದಿನಾಂಕ :- 16 NOV 2019

## -:ಸಭೆಯ ನಡಾವಳಿಗಳು:-

ದಿನಾಂಕ: 12.11.2019 ರಂದು ಬೆಳಿಗ್ಗೆ 11:00 ಗಂಟೆಗೆ ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು(ವಿ), ಜೆಸ್ಕಾಂ ಗಂಗಾವತಿ ವಿಭಾಗ ರವರ ಅಧ್ಯಕ್ಷತೆಯಲ್ಲಿ ಜೆಸ್ಕಾಂ, ಗಂಗಾವತಿ ಉಪ-ವಿಭಾಗದ ಎಲ್ಲಾ ಎಚ್.ಟಿ ಗ್ರಾಹಕರೊಂದಿಗೆ ಸಂವಾದ ಸಭೆ ಜರುಗಿಸಲಾಯಿತು.

**ಅಧ್ಯಕ್ಷತೆ:** ಶ್ರೀ. ನಟರಾಜ್.ಎಚ್.ಎಮ್,
ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನೆ ವಿಭಾಗ,
ಗು.ವಿ.ಸ.ಕಂ.ನಿ, ಗಂಗಾವತಿ.

ಆಧ್ಯಕ್ಷತೆ ಅಪ್ಪಣೆ ಮೇರೆಗೆ ಸಭೆಯಲ್ಲಿ ಗ್ರಾಹಕರ ಕುಂದು ಕೊರತೆಗಳನ್ನು ಚರ್ಚಿಸಲಾಯಿತು.

1) ಶ್ರೀ.ಸೂರ್ಯನಾರಾಯಣ್, ಸಾ:ಗಂಗಾವತಿ, ಎನ್.ಆರ್.ಇಂಡಸ್ಟ್ರಿಸ್ ಮತ್ತು ಸರೋಜಾ ಆಗ್ರೋ ಇಂಡಸ್ಟ್ರಿಸ್ ರವರು ಎಚ್.ಟಿ. ಇಂಡಸ್ಟ್ರಿಗಳಿಗೆ ವಿದ್ಯುತ್ ವ್ಯತ್ಯಯ ಹೆಚ್ಚಿಗೆ ಆಗುತ್ತಿದ್ದು, ಎಲ್ಲಾ ಎಚ್.ಟಿ ಗ್ರಾಹಕರಿಗೆ ಮುಂಚಿತವಾಗಿ ವಿದ್ಯುತ್ ವ್ಯತ್ಯಯದ ಬಗ್ಗೆ ತಿಳಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಅದಕ್ಕೆ ನಮ್ಮ ಕಾರ್ಯನಿರ್ವಾಹಕ ಅಭಿಯಂತರರು(ವಿ), ಮನವಿ ಸ್ವೀಕರಿಸಿ ಎಲ್ಲಾ ಶಾಖಾಧಿಕಾರಿಗಳಿಗೆ ಎಚ್.ಟಿ ಗ್ರಾಹಕರಿಗೆ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡಲು ಸೂಚಿಸಿದರು.

2) ಶ್ರೀ.ಸುರೇಶ್, ಶಾಂತಿ ಉದ್ಯೋಗ್ ಇಂಡಸ್ಟ್ರಿಸ್ ಸಾ:ದಾಸನಾಳ್ ರವರು ತಮ್ಮ ಎಚ್.ಟಿ. ಆರ್.ಆರ್.ಸಂಖ್ಯೆ ಎಚ್‌ಟಿ-17 ರ ಬಿಲ್ಲ್ ಹೆಚ್ಚಿಗೆ ಬಂದಿದ್ದು ಸರಿಪಡಿಸಲು ಮನವಿ ಸಲ್ಲಿಸಿದರು. ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ), ಮನವಿ ಸ್ವೀಕರಿಸಿ ಸಹಾಯಕ ಲೆಕ್ಕಾಧಿಕಾರಿ ಗಂಗಾವತಿ ಉಪ-ವಿಭಾಗ ಇವರಿಗೆ ಪರಿಶೀಲಿಸಲು ಸೂಚಿಸಿ, ಪ್ರಸ್ತುತ ಬಿಲ್ಲ್ ಸರಿ ಇರುವುದೇಂದು ಸ್ಥಳದಲ್ಲೇ ಗ್ರಾಹಕರಿಗೆ ವಿವರಿಸಿದರು.

3) ಶ್ರೀ. ಅಬ್ದುಲ್, ಗಂಗಾವತಿ ರೈಸ್ ಮಿಲ್ ಹೊಸಕೇರಾ ಮತ್ತು ತುಂಗಾಭದ್ರಾ ರೈಸ್ ಮಿಲ್ ಸಾ:ಗಂಗಾವತಿ ರವರು ತಮ್ಮ ಎಚ್.ಟಿ ಆರ್.ಆರ್.ಸಂಖ್ಯೆ ಜಿಎಚ್‌ಟಿ-74 ರೈಸ್ ಮಿಲ್ ನ್ನು ಆಗಸ್ಟ್ 2018ರಿಂದ ಬಂದ್ ಮಾಡಲಾಗಿದ್ದು, ನಿಗಧಿತ ಶುಲ್ಕವನ್ನು ವಿಧಿಸುತ್ತಿದ್ದು ಬಿಲ್ಲ್‌ನ ಮೊತ್ತ ಹೆಚ್ಚಿಗೆ ಬಂದಿರುತ್ತದೆ. ಆದಕಾರಣ ಅದನ್ನು ಸರಿಪಡಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಹಾಗೂ ತಮ್ಮ ಆರ್.ಆರ್.ಸಂಖ್ಯೆಯ ಜಿಎಚ್‌ಟಿ-45ಕ್ಕೆ ಸಂಪರ್ಕಿತ ಲೋಡ್ 450ಕೆವಿಎ ಇದ್ದು, ಅಷ್ಟು ಲೋಡಿನ ಅವಶ್ಯಕತೆ ಇರುವುದಿಲ್ಲ ಕಾರಣ ಲೋಡ್ ಕಡಿತ ಮಾಡಲು ಮನವಿ ಸಲ್ಲಿಸಿದರು. ಅದಕ್ಕೆ ಕಾರ್ಯನಿರ್ವಾಹಕ

Scanned by CamScanner

ಅಭಿಯಂತರರು(ವಿ), ಮನವಿ ಸ್ವೀಕರಿಸಿ, ಕಂಪನಿಯ ನಿಯಾಮಾನುಸಾರ ಅರ್ಜಿ ಸಲ್ಲಿಸಿ ನೋಂದಣಿ ಮಾಡಿ ಲೋಡ್ ಕಡಿತ ಮಾಡಿಸಲು ಸೂಚಿಸಿದರು.

4) ಶ್ರೀ. ಅಮರಗುಂಡಪ್ಪ ಮುರಾರ್ಜಿ ದೇಸಾಯಿ ಶಾಲೆ ಸಾ:ಹೀರೆಬೆಣಕಲ್ ರವರು ತಮ್ಮ ಶಾಲೆಯಲ್ಲಿ ವೋಲ್ಟೇಜ್ ಸಮಸ್ಯೆ ಇದ್ದು ಅದನ್ನು ಸರಿಪಡಿಸಲು ಮನವಿ ಸಲ್ಲಿಸಿದರು. ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು(ವಿ), ಮನವಿ ಸ್ವೀಕರಿಸಿ ಶ್ರೀ.ನಾಗೇಶ್ ದೇಶಪಾಂಡೆ ಪ್ರಭಾರಿ ಶಾಖಾಧಿಕಾರಿ ವೆಂಕಟಗಿರಿ ರವರಿಗೆ ಸ್ಥಳ ಪರಿಶೀಲಿಸಿ ವರದಿ ಸಲ್ಲಿಸಲು ಸೂಚಿಸಿದರು.

5) ಎಚ್.ಟಿ ಗ್ರಾಹಕರ ಮನವಿ ಮೇರೆಗೆ, ಎಫ್–1 ಇಂಡಸ್ಟ್ರಿಯಲ್ ಫೀಡರ್, ಎಫ್–2 ಸಾಯಿಬಾಬಾ ಫೀಡರ್, ಎಫ್–5 ಗಂಗಾವತಿ ಶುಗರ್ ಫೀಡರ್, ಎಫ್–3 ವಡ್ಡರಹಟ್ಟಿ ಫೀಡರ್, ಎಫ್–5 ಬಸಾಪಟ್ಟಣ ಫೀಡರ್‌ಗಳ ಸಂಪೂರ್ಣ ಆಡಿಟ್ ಮಾಡಲು ಕಮಿಟಿ ಮಾಡಿ 15 ದಿನಗಳೊಳಗಾಗಿ ವರದಿ ಸಲ್ಲಿಸಲು ಸೂಚಿಸಿದರು.

| ಕ್ರ.ಸಂಖ್ಯೆ | ಟೀಮ್‌ಗಳು | ಅಧಿಕಾರಿಗಳ ಹೆಸರು | ಫೀಡರ್‌ಗಳ ಹೆಸರು | ಷರ |
|---|---|---|---|---|
| 1 | ಟೀಮ್–1 | 1)ಸಕಾಅ(ವಿ) ಕಾಮಗಾರಿ ಘಟಕ, ಗಂಗಾವತಿ<br>2)ಸಅ(ತಾಂ) ವಿಭಾಗ, ಗಂಗಾವತಿ.<br>3)ಶ್ರೀ.ಅಮರೇಶ್ ಸಅ, ಕಾಮಗಾರಿ ಘಟಕ, ಗಂಗಾವತಿ. | 1) ಎಫ್–5 ಬಸಾಪಟ್ಟಣ ಫೀಡರ್ 2) ಎಫ್–3 ವಡ್ಡರಹಟ್ಟಿ ಫೀಡರ್, | ವೆಂಕಟಗಿರಿ ಶಾಖೆಯ ಶಾಖಾಧಿಕಾರಿಗಳು ಸಂಬಂಧ ಪಟ್ಟ ಲೈನ್ ಮ್ಯಾನ್‌ಗಳ ಜೊತೆಗೂಡಿ ಕಾರ್ಯ ನಿರ್ವಾಹಿಸಿ ಸಂಪೂರ್ಣ ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ |
| 2 | ಟೀಮ್–2 | 1)ಸಕಾಅ(ವಿ) ವಿಭಾಗ ಕಛೇರಿ, ಗಂಗಾವತಿ<br>2)ಸಅ(ತಾಂ) ಉಪ–ವಿಭಾಗ, ಗಂಗಾವತಿ.<br>3)ಶ್ರೀ.ಶಿವಕುಮಾರ್ ಸಅ, ಕಾಮಗಾರಿ ಘಟಕ, ಗಂಗಾವತಿ. | 1) ಎಫ್–1 ಇಂಡಸ್ಟ್ರಿಯಲ್ ಫೀಡರ್,<br>2)ಎಫ್–2 ಸಾಯಿಬಾಬಾ ಫೀಡರ್,<br>3) ಎಫ್–5 ಗಂಗಾವತಿ ಶುಗರ್ ಫೀಡರ್, | ಗಂಗಾವತಿ ಘಟಕ–1 ಹಾಗೂ ಘಟಕ–2 ಶಾಖೆಯ ಶಾಖಾಧಿಕಾರಿಗಳು ಸಂಬಂಧ ಪಟ್ಟ ಲೈನ್ ಮ್ಯಾನ್‌ಗಳ ಜೊತೆಗೂಡಿ ಕಾರ್ಯ ನಿರ್ವಾಹಿಸಿ ಸಂಪೂರ್ಣ ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ |

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:–**

1) ಶ್ರೀ. ನಟರಾಜ್.ಎಚ್.ಎಮ್, ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಗು.ವಿ.ಸ.ಕಂ.ನಿ, ಗಂಗಾವತಿ.
2) ಶ್ರೀ.ಅರುಣ್ ಕುಮಾರ್, ಪ್ರಭಾರಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ), ಗು.ವಿ.ಸ.ಕಂ.ನಿ, ಗಂಗಾವತಿ
3) ಶ್ರೀಮತಿ.ಜ್ಯೋತಿ.ಎಮ್, ಸಹಾಯಕ ಅಭಿಯಂತರರು (ವಿ), ತಾಂತ್ರಿಕ ಶಾಖೆ, ಉಪ–ವಿಭಾಗ, ಗು.ವಿ.ಸ.ಕಂ.ನಿ, ಗಂಗಾವತಿ
4) ಶ್ರೀ.ಕುಮಾರ್ ಚೆನ್ನಬಸವ ಸಹಾಯಕ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ಶಾಖೆ, ಗು.ವಿ.ಸ.ಕಂ.ನಿ, ಗಂಗಾವತಿ
5) ಶ್ರೀ. ಮಂಜುನಾಥ, ಶಾಖಾಧಿಕಾರಿಗಳು (ವಿ) ಆನೆಗುಂದಿ ಶಾಖೆ & ನಗರ ಶಾಖೆ–1, ಕಾರ್ಯ ಮತ್ತು ಪಾಲನಾ ಶಾಖೆ, ಗು.ವಿ.ಸ.ಕಂ.ನಿ, ಗಂಗಾವತಿ

Scanned by CamScanner

6) ಶ್ರೀ. ಕೃಷ್ಣ ಪ್ರಭಾರಿ ಶಾಖಾಧಿಕಾರಿಗಳು (ವಿ), ಕಾರ್ಯ ಮತ್ತು ಪಾಲನಾ ನಗರ ಶಾಖೆ–2, ಗು.ವಿ.ಸ.ಕಂ.ನಿ, ಗಂಗಾವತಿ
7) ಶ್ರೀ. ಮಂಜುನಾಥ, ಶಾಖಾಧಿಕಾರಿಗಳು (ವಿ) ಹಣವಾಳ ಶಾಖೆ (ವಿ), ಕಾರ್ಯ ಮತ್ತು ಪಾಲನಾ ಶಾಖೆ, ಗು.ವಿ.ಸ.ಕಂ.ನಿ, ಗಂಗಾವತಿ
8) ಶ್ರೀ. ನಾಗೇಶ್ ದೇಶಪಾಂಡೆ ಪ್ರಭಾರಿ ಶಾಖಾಧಿಕಾರಿಗಳು (ವಿ), ಕಾರ್ಯ ಮತ್ತು ಪಾಲನಾ ವೆಂಕಟಗಿರಿ ಶಾಖೆ, ಗು.ವಿ.ಸ.ಕಂ.ನಿ, ಗಂಗಾವತಿ

ತಮ್ಮ ವಿಶ್ವಾಸಿ

ಕಾರ್ಯ ನಿರ್ವಾಹಕ ಅಭಿಯಂತರರು (ವಿ),
ಕಾರ್ಯ ಮತ್ತು ಪಾಲನೆ ವಿಭಾಗ,
ಗು.ವಿ.ಸ.ಕಂ.ನಿ., ಗಂಗಾವತಿ.

**ಪ್ರತಿಯನ್ನು ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ:–**
1) ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ), ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ.
2) ಮುಖ್ಯ ಅಭಿಯಂತರರು (ವಿ), ಕಾರ್ಯ ಮತ್ತು ಪಾಲನಾ ವಲಯ, ಗು.ವಿ.ಸ.ಕಂ.ನಿ, 3ನೇ ಮಹಡಿ, ಬುಡಾ ಕಾಂಪ್ಲೆಕ್ಸ್ ಹಿಂಭಾಗ ಮೋತಿ ವೃತ್ತ, ಬಳ್ಳಾರಿ.
3) ಅಧೀಕ್ಷಕ ಇಂಜಿನಿಯರ್ (ವಿ), ಕಾರ್ಯ ಮತ್ತು ಪಾಲನಾ ವೃತ್ತ, ಗು.ವಿ.ಸ.ಕಂ.ನಿ. ಕೊಪ್ಪಳ ಮುನಿರಬಾದ್.

**ಪ್ರತಿಗಳು:–**
1) ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಜೆಸ್ಕಾಂ, ಗಂಗಾವತಿ.
2) ಎಲ್ಲಾ ಶಾಖಾಧಿಕಾರಿಗಳು (ವಿ), ಕಾರ್ಯ ಮತ್ತು ಪಾಲನಾ ಶಾಖೆ, ಗು.ವಿ.ಸ.ಕಂ.ನಿ, ಗಂಗಾವತಿ–1&2/ ವೆಂಕಟಗಿರಿ/ಆನೆಗುಂದಿ/ಹಣವಾಳ/ಕನಕಗಿರಿ
3) ಸಕಾನಿಅ(ವಿ)/ಕ/ಲೆ.ಅ/ಸ.ಲೆ/ಹಿ.ಸ(ಸಿ)/ಮುಕ

ವೆಂಕಟಗಿರಿ ಶಾಖೆಯ ಶಾಖಾಧಿಕಾರಿಗಳು ಸಂಬಂಧ ಪಟ್ಟ ಲೈನ್ ಮ್ಯಾನಗಳ ಜೊತೆಗೂಡಿ ಕಾರ್ಯ ನಿರ್ವಾಹಿಸಿ ಸಂಪೂರ್ಣ ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ

Scanned by CamScanner